## *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 363/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಮದುಸೂದನ್.ಕೆ.ಎಂ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಮಾದೇಗೌಡ.ಕೆ.ಎನ್ | | **31.08.2023** |
| **ವಯಸ್ಸು** | ಃ **43 ವರ್ಷ** | | |
| **ವೃತ್ತಿ** | ಃ ಅಸಿಸ್ಟಂಟ್ ಎಕ್ಸ್ ಕ್ಯೂಟಿವ್ ಇಂಜಿನಿಯರ್, ಚೆಸ್ಕಾಂ, ಸಾಲಿಗ್ರಾಮ | **ಪ್ರಾ.ಸಾ.** | ಃ **03** |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** | ಃ **18** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಕಳೆದ *5* ವರ್ಷಗಳಿಂದ ನಾನು ಅಸಿಸ್ಟಂಟ್ ಎಕ್ಸ್ ಕ್ಯೂಟಿವ್ ಇಂಜಿನಿಯರ್ ಆಗಿ ಚೆಸ್ಕಾಂ ನಲ್ಲಿ ಕೆಲಸ ಮಾಡುತ್ತಿದ್ದೇನೆ. ಸಾಲಿಗ್ರಾಮ ಪೋ.ಠಾಣೆಯಿಂದ ದಿಃ*08.02.2022* ರಂದು ಸಂಜೆ *6* ರಿಂದ ರಾತ್ರಿ *9* ರ ವರೆಗೆ ಭೇರ್ಯ ಗಾಮದ ಕೆ.ಆರ್.ಪೇಟೆ ಭೇರ್ಯ ಮುಖ್ಯ ರಸ್ತೆಯಲ್ಲಿ ಇರುವ ಸತ್ಯನಾರಾಯಣ ಲಾಲ್ ಎನ್ನುವವರ ಮನೆಯ ಮುಂಭಾಗ ಹಾಗೂ ನಿಮಿಷಾಂಬ ಮೊಬೈಲ್ ಮುಂಭಾಗ ವಿದ್ಯುತ್ ಸರಬರಾಜು ಇರುವ ಬಗ್ಗೆ ಪತ್ರ ಬಂದಿದ್ದರಿಂದ ನಾನು ಪವರ್ ಸ್ಟೇಷನ್ ನಿಂದ ಮಾಹಿತಿ ಪಡೆದು ಅದನ್ನು ಪೋ.ಠಾಣೆಗೆ ಕಳುಹಿಸಿದ್ದೆ. ಪವರ್ ಸ್ಟೇಷನ್ ನಿಂದ ಬಂದ ವರದಿ ಪ್ರಕಾರ ಆ ದಿನ ಸಂಜೆ *6.45* ರಿಂದ ವಿದ್ಯುತ್ ಸರಬರಾಜು ಇತ್ತು ಎಂದು ವರದಿ ನೀಡಿದ್ದೇನೆ. ಈಗ ನಾನು ನೊಡುತ್ತಿರುವ ದಾಖಲೆ ನಾನು ಪೋ.ಠಾಣೆಗೆ ಕೊಟ್ಟಿದ್ದ ವರದಿ ಇದ್ದು ಅದರಲ್ಲಿರುವ ಸಹಿ ನನ್ನದೆ ಇದೆ. ಸದರಿ ವರದಿಯನ್ನು ನಿ.ಪಿ–*3* ಮತ್ತು ಸಹಿಯನ್ನು ನಿ.ಪಿ–*3*(ಎ) ಎಂದು ಗುರುತಿಸಿದೆ.

***SC No. 363/2022***
***PW-03***

**ಈ ವೇಳೆಗೆ ಪವರ್ ಸ್ಟೇಷನ್ ನಿಂದ ಬಂದ ಮೂಲ ಪ್ರತಿ ಕಡತದಲ್ಲಿ ಇರಲಿಲ್ಲವಾದ್ದರಿಂದ ಸಾಕ್ಷಿದಾರರ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಗಿದೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**

*SC No. 363/2022*
*PW-03*

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 363/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀಮತಿ ನಿಖಿತಾ.ಹೆಚ್.ಆರ್ | ಪ್ರಮಾಣ ಮಾಡಿಸಿದ ದಿನಾಂಕಃ | |
| ತಂದೆ/ಗಂಡನ ಹೆಸರು | ಃ ಶ್ರೀ ರಾಮಸ್ವಾಮಿ | 31.08.2023 | |
| ವಯಸ್ಸು | ಃ 32 ವರ್ಷ | | |
| ವೃತ್ತಿ | ಃ ಅಸಿಸ್ಟಂಟ್ ಇಂಜಿನಿಯರ್, ಮೈಸೂರು | ಪ್ರಾ.ಸಾ. ಃ | 04 |
| ವಾಸಸ್ಥಳ | ಃ ಮೈಸೂರು | ಚಾ.ಸಾ. ಃ | 19 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. *2018* ಡಿಸೆಂಬರ್ ನಿಂದ *2023* ಆಗಸ್ಟ್ *10* ರ ವರೆಗೆ ನಾನು ಕೆ.ಆರ್.ನಗರದ ಪಿ.ಡಬ್ಲ್ಯೂ.ಡಿ ಕಛೇರಿಯಲ್ಲಿ ಅಸಿಸ್ಟಂಟ್ ಇಂಜಿನಿಯರ್ ಆಗಿ ಕೆಲಸ ಮಾಡಿದ್ದೇನೆ. ದಿಃ*30.09.2021*ರಂದು ನಮ್ಮ ಕಛೇರಿಗೆ ಸಾಲಿಗ್ರಾಮ ಪೋ.ಠಾಣೆಯಿಂದ ಭೇರ್ಯ ಗ್ರಾಮದ ಸತ್ಯನಾರಾಯಣ ಲಾಲ್ ಮನೆಯ ಮುಂಭಾಗದಲ್ಲಿ ನಡೆದ ಘಟನೆ ಸ್ಥಳಕ ನಕಾಶೆಯನ್ನು ತಯಾರಿಸಿಕೊಡುವಂತೆ ಮನವಿ ಪತ್ರ ಬಂದಿತ್ತು. ಆ ಕಾಲಕ್ಕೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ನನ್ನನ್ನು ಆ ಸ್ಥಳದ ನಕಾಶೆ ತಯಾರಿಸಲು ನೇಮಿಸಿದ್ದರು. ದಿಃ *25.11.2021* ರಂದು ಸಾಲಿಗ್ರಾಮ ಪೋ.ಠಾಣೆಯ ಮುಖ್ಯ ಪೇದೆ ಮಹೇಶ್ ಎನ್ನುವವರು ತೋರಿಸಿದ್ದ ಸ್ಥಳವನ್ನು ನೋಡಿ ಆ ಸ್ಥಳದ ಕುರಿತು ನಕಾಶೆ ತಯಾರಿಸಿ ಕೊಟ್ಟಿದ್ದೆ. ಈಗ ನಾನು ನೊಡುತ್ತಿರುವ ನಕಾಶೆ ಅದೇ ಇದ್ದು ಅದರಲ್ಲಿರುವ ಸಹಿ ನನ್ನದೇ ಇದೆ. ಸದರಿ ನಕಾಶೆಯನ್ನು ನಿ.ಪಿ*–4* ಮತ್ತು ಸಹಿಯನ್ನು ನಿ.ಪಿ*–4(*ಎ*)* ಎಂದು ಗುರುತಿಸಿದೆ.

<u>ಪಾಟೀ ಸವಾಲು ಃ2 ರಿಂದ 4 ನೇ ಆರೋಪಿ ಪರ ವಕೀಲರಾದ ಶ್ರೀ ಎಂ.ಎಸ್ ರವರಿಂದಃ-</u>

*2.* ನಕಾಶೆ ತಯಾರಿಸುವ ಕಾಲಕ್ಕೆ ಗಾಯಾಳು ನನಗೆ ಸ್ಥಳವನ್ನು ತೋರಿಸಿಲ್ಲ. ಪೋಲೀಸರು ತೋರಿಸಿ ವಿವರಿಸಿದಂತೆ ಆ ಸ್ಥಳದ ಕುರಿತು ನಕಾಶೆ ತಯಾರಿಸಿದ್ದೇನೆ.

**ಈ ವೇಳೆಗೆ *1* ಆರೋಪಿ ಪರ ವಕೀಉ ಗೈರು ಹಾಜರಾಗಿದ್ದು *1* ನೇ ಆರೋಪಿ ಸಮಯ ಕೋರಿದ್ದು ಸೂಕ್ತ ಕಾರಣ ಹೇಳದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.**

<u>ಮರು ವಿಚಾರಣೆಃ- ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು